ಅಸಾಧಾರಣ ವ್ಯವಹಾರ

ಅಸಾಧಾರಣ ವ್ಯವಹಾರ

ಮುಪ್ಪು ವಯಸ್ಸಿನ ಬಾರ್ಥೋಲೋಮ್ಯು
ನೆಲ್ಲಿಯ ನೆರೆಯಲ್ಲಿ ಇರುತ್ತಿದ್ದರು



ನೆಲ್ಲಿ ಚಿಕ್ಕ ಮಗುವಿದ್ದಾಗ ಅವರು ನೆಲ್ಲಿಯನ್ನು ಮಿಸೆಸ್
ಪ್ರಿಂಗಲ್ ರ ಕೈದೋಟದವರೆಗೆ ತಿರುಗಾಡಲು
ಕರೆದುಕೊಂಡು ಹೋಗುತ್ತಿದ್ದರು.

ಬಾರ್ಥೋಲೋಮ್ಯು ಮಕ್ಕಳಗಾಡಿಯನ್ನು ಮೆಲ್ಲಗೆ
ನೂಕಿಕೊಂಡು ಒಯ್ಯುತ್ತಿದ್ದರು. ಮಿಸ್ಟರ್ ಆಲಿವ್ಹರ್ ಇವರ
ಮನೆ ಎದುರಿನ ವೇಗತಡೆ ಮೇಲಿಂದ ಹೋಗುವಾಗ
“ಗಟ್ಟಿಯಾಗಿ ಹಿಡಿ, ನೆಲ್ಲಿ, ವೇಗತಡೆ ಬಂದಿತು!”
ತಡೆ ದಾಟಿದ ಕೂಡಲೇ ಅವಳು “ಧಮ್ ಧಮ್ ಮ್ ಮ್ ! ”
ಎಂದು ಜೋರಾಗಿ ಕಿರಿಚುತ್ತಿದ್ದಳು.

ದಾರಿಯಲ್ಲಿ ಚೆಂದಾದ ನಾಯಿ ಕಂಡರೆ ಗಾಡಿ
ನಿಲ್ಲಸಿ ಅದರ ಮೈಮೇಲೆ ಪ್ರೀತಿಯಿಂದ
ಕೈಯಾಡಿಸುತ್ತಿದ್ದರು.

ಆದರೆ ಕಚ್ಚುವ ನಾಯಿ ಇದ್ದರೆ
ಬಾರ್ಥೋಲೋಮ್ಯು ಅದನ್ನು ಬೆದರಿಸಿ
ದೂರ ಓಡಿಸುತ್ತಿದ್ದರು.

ಮಿಸೆಸ್ ಪ್ರಿಂಗಲ್ ಇವರ ಹೂದೋಟದಲ್ಲಿಯ
ಕಾರಂಜಿಯಿಂದ ನೀರಿನ ತುಷಾರಗಳು ಹೊರಬರುತ್ತಿದ್ದಾಗ
ಅವರು "ಸಾವಧಾನ...... ಓಓಓಓ..............ಡಿ" ಎಂದು
ಎಚ್ಚರಿಸುತ್ತಿದ್ದರು.
ತುಷಾರಗಳ ಮಧ್ಯದಲ್ಲಿಂದ ಹೋಗುವಾಗ ನೆಲ್ಲಿ "ಹಿ ಹಿ
ಹಿ.....ಹಿ!" ಎಂದು ನಗುತ್ತಿದ್ದಳು.

ನೆಲ್ಲಿ ಹೆಜ್ಜೆ ಇಟ್ಟು ನಡೆಯಲು ಪ್ರಾರಂಭಿಸಿದಾಗ
ಬಾರ್ಥೋಲೋಮ್ಯು ಅವಳ ಕೈ ಹಿಡಿದು
ನಡೆಸಲು ಹವಣಿಸುತ್ತಿದ್ದರು.
ನೆಲ್ಲಿ ಮಾತ್ರ “ಬೇಡ, ಬೇಡ!” ಎಂದು ಚೀರುತ್ತ
ಕೈಕೊಸರಿಸಿಕೊಳ್ಳುತ್ತಿದ್ದಳು. ನೆಲ್ಲಿಗೆ ಯಾರ
ಸಹಾಯ ಬೇಡವಾಗಿತ್ತು.



ಆದ್ದರಿಂದಲೇ ಅವಳಿಗೆ ಬೇಕಿದ್ದರೆ ಮಾತ್ರ ಅವಳ
ಕೈಹಿಡಿಯುತ್ತಿದ್ದರು.



ಬಾರ್ಥೋಲೋಮ್ಯು
ಮುಪ್ಪಾಗುತ್ತಲಿದ್ದರು.
ಈಗೀಗ ನಡೆಯುವಾಗ
ಅವರಿಗೆ ಬಡಿಗೆ
ಹಿಡಿಯಬೇಕಾಗುತ್ತಿತ್ತು.
ಹೀಗಾಗಿ ಅವರು ಬಹು
ಮೆಲ್ಲನೆ ನಡೆಯುತ್ತಿದ್ದರು.
ಮೆಟ್ಟಲೇರುವಾಗ
ಎರಡು ಬದಿಯಲ್ಲಿಯ
ರೇಲುಗಳನ್ನು
ಹಿಡಿಯುತ್ತಿದ್ದರು.

ನೆರೆಹೊರೆಯವರು ಅವರನ್ನು
“ಹ್ಯಾಮ್ ಮತ್ತು ಮೊಟ್ಟೆ” ಎಂದೇ
ಕರೆಯುತ್ತಿದ್ದರು. ಏಕೆಂದರೆ
ಅವರಿಬ್ಬರು ಯಾವಾಗಲೂ
ಕೂಡಿಯೇ ಇರುತ್ತಿದ್ದರು. .

ಹ್ಯಲೋವಿನ್ ರಾತ್ರಿಯಲ್ಲಿಯೂ
ಕೂಡ..

ಚಳಿಗಾಲದ ಥಂಡಿ ದಿನಗಳಲ್ಲಿ ಯಾರೂ ಮನೆ
ಬಿಟ್ಟು ಹೊರಗೆ ಬರದಿದ್ದರೂ ಕೂಡ ಅವರಿಬ್ಬರು
ಹೊರಗೆ ಹೋಗುತ್ತಿದ್ದರು.

ಆ ಮೈಕೊರೆಯುವ ಚಳಿಯಲ್ಲಿ ಬಾರ್ಥೋಲೋಮ್ಯು
ಬಡಿಗೆ ಹಿಡಿದುಕೊಂಡು ಸ್ಕೇಟಿಂಗ್ ಹೇಗೆ
ಮಾಡಬೇಕೆಂದು ನೆಲ್ಲಿಗೆ ಕಲಿಸುತ್ತಿದ್ದರು.
"ಮೆಲ್ಲಗೆ, ಲಕ್ಷವಿಟ್ಟು," ಎಂದು ಪದೇ ಪದೇ
ಹೇಳುತ್ತಿದ್ದರು.

ಒಂದು ದಿನ ನೆಲ್ಲಿ ಅವರ ಕಾಲುಗಳ
ಮೇಲಿಂದಲೇ ಸ್ಕೇಟ್ ನ್ನು ಒಯ್ದುಬಿಟ್ಟಳು.
ಆದರೆ ಅವರು ಸಿಟ್ಟಿಗೇಳಲಿಲ್ಲ.ಕೇವಲ ಸಿಳ್ಳು
ಹಾಕಿ ಕಾಲನ್ನು ತಿಕ್ಕತೊಡಗಿದರು.



ಯಾರದೇ ಸಹಾಯವಿಲ್ಲದೆ ಮೊದಲನೇ ಸಲ ಸ್ಕೇಟಿಂಗ್
ಮಾಡುತ್ತಿರುವಾಗ..

ನೆಲ್ಲಿ ಕೆಳಬಿದ್ದಳು.

ಅವಳು ಅಳಬೇಕು ಎಂದು ಬಾರ್ಥೋಲೋಮ್ಯು ಅವರಿಗೆ ಅನ್ನಿಸುತ್ತಿತ್ತು. ಆಗ ಅವಳನ್ನು ಸಂತೈಸಬೇಕು ಎಂದು ಅವರು ಮನದಲ್ಲಿ ವಿಚಾರ ಮಾಡಿ ತೋಟದಲ್ಲಿಂದ ಗಜ್ಜರೆಯನ್ನು ಕಿತ್ತಿ ತಂದು “ಮಗು, ನೀನು ಅಳಬೇಡ, ಈ ಗಜ್ಜರಿಗಳನ್ನು ತಿನ್ನು” ಎಂದೆನ್ನುತ್ತ ಅವಳ ಕೈಯಲ್ಲಿ ಗಜ್ಜರಿಯನ್ನು ಕೊಟ್ಟರು.

ನೆಲ್ಲಿ ನಗುನಗುತ್ತ ಗಜ್ಜರಿಗಳನ್ನು ತಿನ್ನತೊಡಗಿದಳು. ಅವಳಿಗೆ ಗಜ್ಜರಿ ಸೇರುತ್ತಿದ್ದವು. ಆದರೆ ಗಜ್ಜರಿಗಿಂತ ಬಾರ್ಥೋಲೋಮ್ಯು ಹೆಚ್ಚು ಸೇರುತ್ತಿದ್ದರು.

ಕೆಲ ದಿನಗಳಾದ ಮೇಲೆ ನೆಲ್ಲಿ
ಶಾಲೆಗೆ ಹೋಗತೊಡಗಿದಳು.

ಮತ್ತು ಬಾರ್ಥೋಲೋಮ್ಯು ಮತ್ತಷ್ಟು
ಮುಪ್ಪಾಗತೊಡಗಿದರು.

ಈಗೀಗ ಅವರಿಗೆ ಯಾರಾದರ ನೆರವು
ಬೇಕಾಗುತ್ತಿತ್ತು. ಆದರೆ ನೆರವು ಕೇಳುವದು
ಅವರಿಗೆ ಹಿಡಿಸುತ್ತಿರಲಿಲ್ಲ.

ಹೀಗಾಗಿ ನೆಲ್ಲಿ ಅವರಿಗೆ
ನಿಜವಾಗಿ ನೆರವು ಬೇಕಿದ್ದರೆ
ಮಾತ್ರ ಅವರಿಗೆ ಸಹಾಯ
ಮಾಡುತ್ತಿದ್ದಳು.

ಬಾರ್ಥೋಲೋಮ್ಯು ವಿಶ್ರಮಿಸಲು
ನಿಂತಾಗ ನೆಲ್ಲಿ ಅವರಿಗೆ ಹಳೆಯ
ದಿನಗಳ ಕತೆ ಹೇಳಿ ಎಂದು
ಒತ್ತಾಯಿಸುತ್ತಿದ್ದಳು.

ಒಮ್ಮೆ ಕತೆ ಕೇಳಿದ ಮೇಲೆ “ನಮ್ಮ ಹತ್ತಿರ
ಮಾತನ್ನಾಡಲು ವಿಷಯಗಳೇ ಇರದ ದಿನ
ಎಂದಾದರೂ ಬರುವದೇ? ” ಎಂದು ನೆಲ್ಲಿ
ಕೇಳಿದಳು.

“ಇಂತಹ ದಿನ ಬಂದರೆ ನಾವಿಬ್ಬರು ಸುಮ್ಮನೆ
ಕುಳಿತುಕೊಳ್ಳುವ. ನಿಜವಾದ ಗೆಳೆತನ ಹೀಗೆಯೇ
ಇರುತ್ತದೆ. ”

ನೆಲ್ಲಿ ಕಟ್ಟೆಯ ಮೇಲೆ ಸುಮ್ಮನೆ
ಬಾರ್ಥೋಲೋಮ್ಯು ಬಾರಿಸುತ್ತಿದ್ದ
ಹಾರ್ಮೋನಿಕಾ ಆಲಿಸುತ್ತ ನೆಲ್ಲಿ ಕಟ್ಟೆಯ ಮೇಲೆ
ಸುಮ್ಮನೆ ಕುಳಿತುಕೊಳ್ಳುತ್ತಿದ್ದಳು. ಆ ಧ್ವನಿಗೆ
ಸರಿಬರುವಂತಹ ಶಬ್ದಗಳನ್ನು ರಚಿಯುತ್ತಿದ್ದಳು.

ಒಂದು ದಿವಸ ಬಾರ್ಥೋಲೋಮ್ಯು ಒಬ್ಬರೆ
ಹೊರಗೆ ಹೋಗುತ್ತಿದ್ದರು. ಅಲ್ಲಿಯ ಮೆಟ್ಟಲುಗಳ
ಮೇಲಿಂದ ಜಾರಿ ಬಿದ್ದರು. ಕೆಂಪು ದೀಪದ
ಸಾಯರನ್ ಇರುವ ಅಂಬ್ಯುಲನ್ಸ ಧ್ವನಿ ಮಾಡುತ್ತ
ಅವರನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಯಿತು.

ಸಾಕಷ್ಟು ದಿನ ಅವರು ಆಸ್ಪತ್ರೆಯಲ್ಲಿಯೇ ಇದ್ದರು.

ನೆಲ್ಲಿ ದಿನಾಲು ಪತ್ರ ಬರೆಯುತ್ತಿದ್ದಳು, ಎಲ್ಲ
ಪತ್ರಗಳ ಕೊನೆ ಮಾತ್ರ “ಬೇಗ ತಿರುಗಿ ಬನ್ನಿ.
ನಾವು ತಿರುಗಾಡಲು ಹೋಗುವ.” ಎಂಬ
ವಾಕ್ಯದಿಂದ ಮುಕ್ತಾಯವಾಗುತ್ತಿತ್ತು.

ಬಾರ್ಥೋಲೋಮ್ಯು ಆಸ್ಪತ್ರೆಯಿಂದ ವ್ಹೀಲ್ ಚೇಅರ್
ಮೇಲೆ ಕುಳಿತೇ ಮನೆಗೆ ತಿರುಗಿ ಬಂದರು. “ಇನ್ನು
ಮುಂದೆ ತಿರುಗಾಡಲು ಹೋಗುವದು
ಶಕ್ಯವಾಗಲಾರದು. ” ಎಂದು ಹೇಳಿದರು.
“ಹಾಗೇನಿಲ್ಲ, ನಾನೇ ನಿಮ್ಮನ್ನು ತಿರುಗಾಡಲು
ಕರೆದುಕೊಂಡು ಹೋಗುವೆ.” ಎಂದು ನೆಲ್ಲಿ ಹೇಳಿದಳು.

ಅವಳಿಗೆ ಏನು ಮಾಡಬೇಕು ಎಂಬುದು ತಿಳಿದಿತ್ತು.

ಮೆಲ್ಲಗೆ, ಲಕ್ಷವಿಟ್ಟು.....

ವೇಗವನ್ನು ಹೆಚ್ಚಿಸದೆ
ನೂಕಬೇಕು..

ಮಿಸ್ಟರ್ ಆಲಿವ್ವರ್ ಮನೆ ಸಮೀಪದ
ದಾರಿತಡೆ ದಾಟುವಾಗ ಅವಳು ಜೋರಾಗಿ
"ಎಚ್ಚರಿಕೆ, ಗಟ್ಟಿಯಾಗಿ ಹಿಡಿ, ಶಾಕ್
ಕೊಡುತ್ತದೆ!" ಎಂದು ಕೂಗುತ್ತಿದ್ದಳು.

ದಾರಿತಡೆ ದಾಟಿದ ಮೇಲೆ ಕೌಬಾಯ್ ಗಳ
ಹಾಗೆ ಬಾರ್ಥೋಲೋಮ್ಯು ತಲೆ ಮೇಲಿನ
ಹ್ಯಾಟನ್ನು ಕೈಯಲ್ಲಿ ಹಿಡಿದು
ಅಲುಗಾಡಿಸುತ್ತದ್ದರು.

ದಾರಿಯಲ್ಲಿ ಚೆಂದಾದ ನಾಯಿ ಕಂಡರೆ ಗಾಡಿ ನಿಲ್ಲಸಿ
ಅದರ ಮೈಮೇಲೆ ಪ್ರೀತಿಯಿಂದ
ಕೈಯಾಡಿಸುತ್ತಿದ್ದರು.

ಆದರೆ ಕಚ್ಚುವ ನಾಯಿ ಇದ್ದರೆ ನೆಲ್ಲಿ ಅದನ್ನು
ಬೆದರಿಸಿ ದೂರ ಓಡಿಸುತ್ತಿದ್ದಳು.



ಒಂದು ದಿನ ಮಿಸೆಸ್ ಪ್ರಿಂಗಲ್ ಇವರ ಉದ್ಯಾನದ ಕಾರಂಜಿಯಿಂದ ತುಷಾರಗಳು ಬರುತ್ತಿದ್ದವು. ನೆಲ್ಲಿ ನೀರು ಹನಿಗಳು ಸಿಡಿಯದಂತೆ ವ್ಹೀಲ್ ಚೇಅರ್ ನೂಕಬೇಕೆಂದು ಬದಿಯಿಂದ ಹೋಗತೊಡಗಿದಳು. ಆದರೆ ಫಕ್ಕನೆ ವಿಚಾರ ಬದಲಿಸಿ "ಸರಿ, ಬಾರ್ಥೋಲೋಮ್ಯು, ತಯಾರಾಗಿ, ಒಂದು... ಎರಡು.... ಮೂರು...ಓ..ಓ..   ಡಿSSSSS... " ಎಂದೆನ್ನುತ್ತ ನೀರಿನ ಹನಿಗಳ ನಡುವೇನೆ ಚೇಅರ್ ನ್ನು ಓಡಿಸಿದಳು.

.

"ಓಹ್ .. ಬಹಳ ಸಂತಸವಾಯಿತು!" ಬಾರ್ಥೋಲೋಮ್ಯು ನುಡಿದರು. ನೆಲ್ಲಿ ಮುಗುಳ್ನಗುತ್ತ "ವ್ಹೀಲ್ ಚೇಅರ್ ಕ್ಕೆ ಜಂಗು ಹಿಡಿದರೆ...?" ಎಂದು ಕೇಳಿದಳು. "ಹಿಡಿದರೆ ಹಿಡಿಯಲಿ. ಅದರ ಚಿಂತೆ ಬೇಡ." ನಗುತ್ತಲೇ ಹೇಳಿದರು



ಮಿಸೆಸ್ ಪ್ರಿಂಗಲ್ ಬೇಲಿಯ ಬಳಿ ಬಂದು
“ನಿನ್ನೆ-ಮೊನ್ನೇನೆ ನಿನ್ನನ್ನು ಗಾಡಿಯಲ್ಲಿ ತಿರುಗಾಡಿಸಲು
ಒಯ್ಯುತ್ತಿದ್ದಂತೆ ಅನ್ನಿಸುತ್ತದೆ..” ಎಂದು ನುಡಿದರು.

“ಆಗ ನಾನು ಚಿಕ್ಕವಳಿದ್ದೆ,” ನೆಲ್ಲಿ ಹೇಳತೊಡಗಿದಳು.
“ಈಗ ನೂಕುವದು ನನ್ನ ಕೆಲಸ ಮತ್ತು ಗಾಡಿಯಲ್ಲಿ
ಕುಳಿತುಕೊಳ್ಳುವದು ಬಾರ್ಥೋಲೋಮ್ಯುನ ಕೆಲಸ.. ಇದು
ಒಂದು ರೀತಿಯಲ್ಲಿ ಸರಿಯಾದ ವ್ಯವಹಾರ.. .”

ಬಟ್ಟೆ ಒಣಗಿಸಲೆಂದು ಬಿಸಿಲಲ್ಲಿ ಇಬ್ಬರು ಕುಳಿತರು. ನೆಲ್ಲಿ ಗಜ್ಜರಿ ತಿನ್ನುತ್ತದ್ದಳು. ಬಾರ್ಥೋಲೋಮ್ಯು ಹಾರ್ಮೋನಿಕಾದ ಮೇಲೆ ಸಂಗೀತ ನುಡಿಸುತ್ತಿದ್ದರು. ಅವರ ಕಣ್ಣುಗಳಲ್ಲಿ ಸಂತಸವು ಮಿನುಗುತ್ತಿತ್ತು .

ಮುಕ್ತಾಯ